ಓ ಎಸ್ಃ 577/2014

ಡಿ ಡಬ್ಲ್ಯೂ ಃ 5

ದಿನಾಂಕಃ 04.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ವಾದಿ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ**

ಈ ಹಿಂದೆ ನಿ ಡಿ 6 ರಲ್ಲಿ ನೋಂದಣಿಯಾಗಿರುವ ಕ್ರಯಪತ್ರದ ಅಸಲಿ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಕೊಡುತ್ತೇನೆಂದು ಹೇಳಿದ್ದು, ಸದರಿ ಪ್ರತಿಯನ್ನು ಈಗ ನನಗೆ ಕೊಡಲು ಆಗುತ್ತದೆ ಎಂದರೆ ಸಾಕ್ಷಿ ಸದರಿ ಪ್ರತಿಗಳು ನನ್ನ ಅಣ್ಣನವರು ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಸರು ನಾಗರಾಜು. ನಾನು ಯಾವುದೇ ಮೂಲ ಪ್ರತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಕೊಟ್ಟಿರುತ್ತೇನೆ. ನಿ ಡಿ 6 ನೋಂದಣಿಯಾಗದೇ ದಾಖಲಾತಿಯಾಗಿರುತ್ತದೆ. ನಾನು ಸದರಿ ದಾಖಲಾತಿ ನೋಂದಣಿಯಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿ ನೋಂದಣಿಯಾಗದೇ ಇರುವ ಕಾರಣ ನಾನು ಸದರಿ ದಾಖಲಾತಿಯ ಅಸಲಿ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ನನ್ನ ಅಣ್ಣನವರು ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ವಿಭಾಗಪತ್ರದ ಆಧಾರದ ಮೇಲೆ ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿ ಖಾತೆ ಬದಲಾವಣೆಗಳಾಗಿರುತ್ತವೆ. ನನಗೆ ಎಂ ಆರ್ ನಂಬರ್ ಗಳು ಹೇಳಲಾಗುತ್ತದೆಯೋ ಎಂದರೆ ಅದು ನಮ್ಮ ಅಣ್ಣನವರು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಣ್ಣನವರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುತ್ತದೆ. ನನ್ನ ಪ್ರಮಾಣಪತ್ರದಲ್ಲಿ ನಮ್ಮ ಅಣ್ಣನವರು ಯಾವ ಯಾವ ದಾಖಲಾತಿಗಳನ್ನು ಕೊಟ್ಟಿರುತ್ತಾರೆ ಎಂದು ಬರೆಯಿಸಿ ಹಾಕಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಈ ಕೇಸ್ ಗೆ ಅನುಕೂಲವಾಗುವಂತೆ ಸೃಷ್ಟಿ ಮಾಡಿ ಹಾಜರುಪಡಿಸಿರುವ ದಾಖಲಾತಿಗಳು ಎಂದರೆ ಸುಳ್ಳು. ಸದರಿ ದಾಖಲಾತಿಗಳು ಸೃಷ್ಟಿ ಮಾಡಿದ ದಾಖಲಾತಿ ಗಳು ಆದ ಕಾರಣ ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸುಳ್ಳು. ನಾನು ಸೃಷ್ಟಿತ ದಾಖಲಾತಿಗಳ ಆಧಾರದ ಮೇಲೆ ಈ ದಾವೆಯಲ್ಲಿಬಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಆ ಕಾರಣದಿಂದ ನನಗೆ ಈ ದಾಖಲಾತಿಗಳ ಬಗ್ಗೆ ಖುದ್ದಾಗಿ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ನಮ್ಮ ಅಣ್ಣನಿಗೆ ಗೊತ್ತಿರುತ್ತದೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳಲ್ಲಿ ಜುಂಜಯ್ಯ ನಿಗೆ ಭಾಗದ ಹಕ್ಕು ಇರುತ್ತದೆ ಎಂದರೆ ಸುಳ್ಳು . ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಭಾಗವಾಗಿದ್ದು, ನನ್ನ ಚಿಕ್ಕಪ್ಪ ಅವರಿಗೆ ಬಂದ ಭಾಗವನ್ನು ಮಾರಾಟ ಮಾಡಿರುವುದರಿಂದ ವಾದಿಗಳಿಗೆ ಈ ಸ್ವತ್ತಿನಲ್ಲಿ ಭಾಗದ ಹಕ್ಕು ಇರುವುದಿಲ್ಲ. ಯಾವ್ಯಾವ ಆಸ್ತಿಗಳು ನನ್ನ ತಂದೆಗೆ ಬಂದಿತ್ತು, ಯಾವ ಆಸ್ತಿಗಳು ನನ್ನ ಚಿಕ್ಕಪ್ಪನಿಗೆ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ನಿ ಡಿ 6 , 1975 ರ ವಿಭಾಗಪತ್ರ ಮತ್ತು ನರಸಿಂಹಯ್ಯ ನವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ಹೇಳಲಾಗಿರುವ ಪತ್ರ ಸೃಷ್ಟಿತ ದಾಖಲಾತಿಗಳಾದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ಈ ಎಲ್ಲ ದಾಖಲಾತಿಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಇರುತ್ತದೆ. ನನಗೆ ಚೆಕ್ಕು ಬಂದಿ ಮತ್ತು ವಿಸ್ತೀರ್ಣದ ಬಗ್ಗೆ ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ . ನಮ್ಮ

ಅಣ್ಣಂದಿರ ಮಾತು ಕೇಳಿ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಲಿಖಿತ ಹೇಳಿಕೆ ಮತ್ತು ಪ್ರಮಾಣಪತ್ರದ ಅನುಗುಣವಾಗಿ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸಾಕ್ಷಿ ನಮ್ಮ ಅಣ್ಣನವರೇ ದಾಖಲಾತಿಗಳನ್ನು ನೀಡಿರುವ ಕಾರಣ ನಾನು ದಾಖಲಾತಿಗಳನ್ನು ನ್ಯಾಯಾಲಯ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ . ನನ್ನ ಪ್ರಮಾಣಪತ್ರ ಮತ್ತು ನನ್ನ ಲಿಖಿತ ಹೇಳಿಕೆಯಲ್ಲಿ ನನ್ನ ಅಣ್ಣನವರು ದಾಖಲಾತಿಗಳನ್ನು ನೀಡಿರುವ ಕಾರಣ ನಾನು ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದು ಬರೆಯಿಸಿರುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಪ್ರಮಾಣಪತ್ರ ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**